**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ36 ಪಿ ಡಬ್ಲ್ಯೂಃ31**

**ಹೆಸರುಃ ಶಂಕರಗೌಡ**

**ತಂದೆ ಹೆಸರುಃ ಶಿವನಗೌಡ ಹಿರೇಗೌಡರ್**

**ವಯಸ್ಸುಃ 66 ವರ್ಷಗಳು.**

**ಉದ್ಯೋಗಃ ನಿವೃತ್ತ ಪಿಡಿಓ, ಇಂಗಳಗಿ ಗ್ರಾಮ ಪಂಚಾತ (ಹಾಲಿ ವ್ಯವಸಾಯ)**

**ವಾಸ ಸ್ಥಳಃ ಸಂಕ್ಲೀಪುರ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನವನ್ನು ದಿಃ09.01.2026 ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ2 ರಿಂದ 5, 7, 10 ರಿಂದ 18, 19 ರಿಂದ 26, 27 ರಿಂದ 34 ಪರಿಚಯ ಇರುವುದಿಲ್ಲ. ಚಾಸಾಃ1, 6, 8, 9, 35 ಹಾಗೂ 37 ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 3 ಮತ್ತು 15 ನೇ ಆರೋಪಿತರು ಹಾಜರು ಇದ್ದು, 1, 2, 4, 5, 6, 8, 9 ರಿಂದ 14 ರವರು ಆರೋಪಿ ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿಯ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ನಾನು ಹಿಂದಿನ ಪಿಡಿಓ ಶೆಟ್ಟನವರ ಇವರಿಂದ ದಿಃ26.09.2010 ಪ್ರಭಾರ ಪಿಡಿಓ ಅಂತ ಚಾರ್ಜ ತೆಗೆದುಕೊಂಡು ದಿಃ02.07.2014 ರಂದು ಹೊಸದಾಗಿ ಬಂದ ದರ್ಮಣ್ಣ ಎ.ಕೆ ಇವರಿಗೆ ಪಿಡಿಓ ಚಾರ್ಜ ನೀಡಿರುತ್ತೇನೆ ಎಂದರೆ ಸರಿ. ಸಧ್ಯ ನಮ್ಮ ಗ್ರಾಮ ಪಚಾಯತಿನಲ್ಲಿ ಅಂತ

ಪಿಡಿಓ ದರ್ಮಣ್ಣ ಎಕೆ ಹಾಗೂ ಕ್ಲರ್ಕ 3 ನೆ ಆರೋಪಿ, ಬಿ ಎಮ್ ಮಲಿಗವಾಡ ಅನ್ನುವರು ಕೆಲಸ ಮಾಡುತಿದ್ದರು ಎಂದರೆ ಸರಿ. ನಮ್ಮ ಗ್ರಾಮ ಪಂಚಾಯತಿನಲ್ಲಿ ಅಧ್ಯಕ್ಷರು ಅಂತ ಬಿ ಎಮ್ ಕಂತೇಪ್ಪಗೌಡರ ಉಪಧ್ಯಾಕ್ಷರು ಅಂತ ಜಿ ಬಿ ಬಾರಕೇರ ಇದ್ದರು ಎಂದರೆ ಸರಿ. ನಮ್ಮ ಗ್ರಾಮ ಪಚಾಯತಿನಲ್ಲಿ ಹಿರೇಬೂದಿಹಾಳ ಗ್ರಾಮ ಸಮಾವೇಶಗೊಂಡಿದೆ ಎಂದರೆ ಸರಿ. ಅದರಲ್ಲಿ ಒಟ್ಟು 15 ಜನ ಸದಸ್ಯರು ಎಂದರೆ ಸರಿ. ಜೂನ್ 2010 ರಿಂದ ಹೊಸದಾಗಿ ಆಯ್ಕೆಯಾದ ಪಂಚಾಯತ ಕಮಿಟಿಯವರು ಆಡಳಿತ ನಡೆಸುತಿದ್ದರು ಎಂದರೆ ಸರಿ.

ಇಂಗಳಗಿ ಗ್ರಾಮ ಪಂಚಾಯತನಲ್ಲಿ 2009-10 ಹಾಗೂ 2010-11 ರಲ್ಲಿ ಮರೇಗಾ ಯೋಜನೆಯಲ್ಲಿ ಹಿಂದಿನ ಪಿಡಿಓ ಹಾಗೂ ಹಿಂದಿನ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಹಣಕಾಸಿನ ವ್ಯವಹಾರದಲ್ಲಿ ಅವ್ಯವಹಾರ ಮಾಡಿರುತ್ತಾರೆ ಅಂತ ಚಾಸಾಃ1 ರವರು ಪ್ರಕರಣದ ದಾಖಲಿಸಿದ ವಿಷಯ ನನಗೆ ಗೊತ್ತು. ಹಿರೇಬೂದಿಹಾಳ ಗ್ರಾಮದ ಮಲ್ಲೇಶಪ್ಪ ದೇವಪ್ಪ ಸೋಮಣ್ಣನವರ, ನೇಮನಗೌಡ ಸಿದ್ದನಗೌಡ ಕಂಠೆಪ್ಪಗೌಡರ ಇಬಬರಿಗೂ ಮೇಟ್ಸ ಅಂತ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ. ಜಾಗೃತ ದಳದವರು ಪರಿಶೀಲನೆಗೆ ಬಂದಾಗ ನಾನು ಕೆಲವೊಂದು ದಾಖಲೆಗಳನ್ನು ಅವರಿಗೆ ಒದಗಿಸಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ ಆರೋಪಿತರ ಪರ ವಕೀಲರುಃ**

1. ನಾನು ಇಂಗಳಗಿ ಪಿಡಿಓ ಆಗಿ ಕರ್ತವ್ಯನಿರ್ವಹಿಸಿರುವ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿ ಇವರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಇಂಗಳಗಿ ಪಿಡಿಓ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**